

# ಕಪ್ಪು–ಬಿಳುಪಿನ ಲೋಕ

(6ನೇ ಪುಟದಿಂದ)

ವಿಭಿನ್ನ ಮುಖ ಭಾವಗಳನ್ನು ಕೆಮೆರಾದಲ್ಲಿ ಸೆರೆ ಹಿಡಿದು ಅವರಿಗೇ ತೋರಿದಾಗ ಅವರ ಮುಖದಲ್ಲಿ ಹೊಮ್ಮುವ ಮತ್ತೊಂದು ಭಾವನೆಯನ್ನು ನೋಡುವುದೇ ಸುಂದರ ಅನುಭವ!

ಈ ಕಪ್ಪು–ಬಿಳುಪು ಚಿತ್ರಗಳು ಬದುಕಿನ ವಿವಿಧ ಮಜಲುಗಳ ಚಿತ್ರಣವನ್ನು ತೆರೆದಿಡುತ್ತವೆ. ಇತರ ಬಣ್ಣಗಳಿಂದ ದೂರವಾಗಿ ಕಪ್ಪು ಬಿಳುಪಿನಲ್ಲಿ ಹಿಡಿದಿಟ್ಟರೆ ಅವುಗಳಿಗೇನೋ ಒಂದು ಪ್ರತ್ಯೇಕ ಸೌಂದರ್ಯ. ಮುದ್ದು ಮಕ್ಕಳ ಮುಗ್ಧ ನೋಟ, ಇಳಿ ವಯಸಿನ ಮುಖದ ಅನುಭವದ ಗೆರೆಗಳು,  ಹೀಗೆ ಕಪ್ಪು ಬಿಳುಪಿನ ಚಿತ್ರಗಳನ್ನು ತೆಗೆಯಹೊರಟರೆ ಪ್ರತಿಯೊಂದು ಮುಖಗಳೂ ಕಥೆ ಹೇಳುತ್ತವೆ! ಅದು ಜೀವನದ ಕಥೆ– ಕಪ್ಪು ಬಿಳುಪಿನ ವರ್ಣಗಳ ಜತೆ.

ಪ್ರಾಣಿಗಳು, ಬಹುಕಾಲ ಬಾನೆತ್ತರಕ್ಕೆ ನಿಂತ ಮರಗಳು, ಮಳೆ ಹನಿಗಳು, ಮನೆಯೊಳಗೆ ಇಣುಕಿದ ಬೆಳಕಿನ ಹಾದಿ ಹೀಗೆ ವಿಭಿನ್ನ ಸಂದರ್ಭಗಳಲ್ಲಿ ಕಪ್ಪು ಬಿಳುಪು ವರ್ಣ ಸಂಯೋಜನೆ ಮಾಡಿ ತೆಗೆದ ಚಿತ್ರಗಳನ್ನು ನೋಡುವುದು ಒಂದು ಸುಂದರ ಅನುಭವ. ಈ ಚಿತ್ರಗಳಿಗೆ ಮನುಜರ ಮನಸನ್ನು ಓಲೈಸುವ ಗುಣವಿದೆ. ತದೇಕಚಿತ್ತದಿಂದ ತಮ್ಮನ್ನು ನೋಡಿ ಖುಷಿಪಡಲಿ ಎಂಬ ಭಾವವಿದೆ. ತಮ್ಮನ್ನು ಬಹಳಷ್ಟು ಕಾಲ ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡುವ ಗುಣವಿದೆ.

ಕಪ್ಪು ಬಿಳುಪಿನ ಚಿತ್ರವನ್ನು ಸೆರೆಹಿಡಿಯುವುದು ಸುಲಭವೂ ಅಲ್ಲ. ಬೆಳಕು ಸ್ವಲ್ಪ ಹೆಚ್ಚಾದರು ಬಿಳಿ ಬಣ್ಣದಲ್ಲಿ ವ್ಯತ್ಯಾಸವಾಗಿ ಚಿತ್ರ ಕೆಡುತ್ತದೆ. ಬೆಳಕು ಕಡಿಮೆಯಾದರೆ ಕಪ್ಪು ಬಣ್ಣ ವ್ಯತ್ಯಾಸವಾಗುತ್ತದೆ.

ಮೊಬೈಲ್ ಕ್ಯಾಮೆರಾದಲ್ಲೂ ಕಪ್ಪು ಬಿಳುಪಿನ ಚಿತ್ರಗಳನ್ನು ತೆಗೆಯುವ ಸೌಲಭ್ಯವಿದೆ. ಆದರೆ ವೃತ್ತಿಪರ ಕ್ಯಾಮೆರಾಗಳಿಗೆ ಹೋಲಿಸಿದರೆ ಮೊಬೈಲ್ ಕ್ಯಾಮೆರಾಗಳಲ್ಲಿನ ಪಿಕ್ಸೆಲ್ ಮತ್ತು ಗುಣಮಟ್ಟದ ಕೊರತೆಯಿಂದ ಉತ್ತಮ ಗುಣಮಟ್ಟದ ಚಿತ್ರಗಳನ್ನು ನಿರೀಕ್ಷಿಸುವುದು ತುಸು ಕಷ್ಟ.



